**ದಿನಾಂಕ:15-02-2024 ರಂದು ಪ್ರಮಾಣ ವಚನ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ಆರೋಪಿತರ ಪರ: ಜೆಕೆಎಸ್. ವಕೀಲರಿಂದ:**

ನಾನು ಶಂಷಾದ್ ಬೇಗಂರವರ ಮನೆಯಲ್ಲಿ ವಾಸವಿದ್ದೇನೆ ಎಂದು ಹೇಳಿಲ್ಲ. ಬಾಂಬೆ ಆಂಟಿರವರ ಕಡೆಯವರನ್ನು ವಿಚಾರ ಮಾಡಲು ಸಾಧ್ಯವಿಲ್ಲ. ನಾನು ಬಾಂಬೆ ಆಂಟಿಯವರ ಜೊತೆಯಲ್ಲಿ ಸುಮಾರು 5-6 ವರ್ಷಗಳ ಕಾಲ ಇದ್ದೆ. ನನ್ನ ತಂದೆ ತಾಯಿ ಇಲ್ಲದ ಕಾರಣ ಮತ್ತು ನಾನು ಒಬ್ಬಳೇ ಇದ್ದ ಕಾರಣ ನಾನು ಬಾಂಬೆ ಆಂಟಿಯವರ ಜೊತೆಯಲ್ಲಿ ವಾಸವಿದ್ದೆ. ಯಾವ ವರ್ಷದಲ್ಲಿ ಬಾಂಬೆ ಆಂಟಿಯವರ ಮನೆಯಲ್ಲಿ ಇದ್ದೆ ಎಂದು ಹೇಳಲಿಕ್ಕಾಗುವುದಿಲ್ಲ. ಸುಮಾರು 20 ವರ್ಷಗಳ ಹಿಂದೆ ಅವರ ಜೊತೆಯಲ್ಲಿ ಇದ್ದೆ. ಶಂಷಾದ್ ಬೇಗಂರವರು ನನ್ನ ಸಹೋದರಿ ಅಲ್ಲ.

ಆರೋಪಿತರು ದಾಖಲೆಗಳನ್ನು ಬದಲಾಯಿಸಿಕೊಂಡು ಸೃಷ್ಠಿ ಮಾಡಿದ್ದಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಇರುವುದನ್ನು ಆರೋಪಿತರು ಬದಲಾವಣೆ ಮಾಡಿಕೊಂಡಿದ್ದಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ದಿ:05-07-2015 ರಂದು ಸಂಜೆ 5-00 ಗಂಟೆ ಸಮಯದಲ್ಲಿ ಆರೋಪಿತರು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ನಾನು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಪೋಲೀಸರಿಗೆ ದೂರು ಕೊಟ್ಟ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆರೋಪಿತರು ಫೋರ್ಜರಿ ಮಾಡಿದ್ದಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರು ಹೆಸರುಗಳನ್ನು ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಿ:05-07-2015 ರಂದು ನನ್ನನ್ನು ಹೊರದಬ್ಬಲು ಪ್ರಯತ್ನಿಸಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

50X 30 ಅಡಿ ಜಾಗಕ್ಕೆ ನಾನು ಮಾಲೀಕಳಲ್ಲ ಎಂದರೆ ಸರಿಯಲ್ಲ. ಈ ಸ್ವತ್ತು 1 ನೇ ಆರೋಪಿಗೆ ಮಂಜೂರಾಗಿತ್ತು ಎಂದರೆ ಸರಿಯಲ್ಲ. ನ್ಯಾಯ ಆರೋಪಿತರ ಕಡೆ ಇದ್ದ ಕಾರಣ ಆರೋಪಿತರು ನನ್ನ ದೂರನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಅಲಭ್ಯ ಪ್ರಮಾಣಪತ್ರವನ್ನು ಮುನಿಸಿಪಾಲಿಟಿಯಿಂದ ತಂದಿದ್ದೇನೆ, ಆದರೆ ಅದನ್ನು ತಾಲೂಕು ಕಛೇರಿಯಿಂದ ಪಡೆಯಬೇಕಾಗಿತ್ತು ಎಂದರೆ ಸರಿಯಲ್ಲ. ಬಲವಂತವಾಗಿ ಖಾತೆ ಬದಲಾವಣೆ ಮಾಡಿದ ಬಗ್ಗೆ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಂಡಿದ್ದೀರಾ ಎಂದರೆ, ಅವರುಗಳು ಸರಿ ಇದೆ ಎಂದು ಬದಲಾವಣೆ ಮಾಡಿರುತ್ತಾರೆ. ನನ್ನ ದೂರಿನಲ್ಲಿ

ಮಾಡಿರುವ ಆರೋಪಗಳೆಲ್ಲಾ ಸುಳ್ಳು ಆರೋಪಗಳು ಮತ್ತು ಆರೋಪಿತರು ನಾನು ಹೇಳಿದಂತಹ ಯಾವುದೇ ತಪ್ಪನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಅಪಘಾತ ಆಗಿತ್ತು ಎಂದರೆ ಸರಿಯಲ್ಲ, ಅವರಿಗೆ ಹುಷಾರಿರಲಿಲ್ಲ. ನನ್ನ ತಂದೆ ಮೊಹಿದ್ದೀನ್ ಷರೀಫ್ ರವರಿಗೆ ಅಪಘಾತ ಆದ ಸಂಬಂಧ ನಾನು ಹಾಸನ ನ್ಯಾಯಾಲಯದಲ್ಲಿ ಪರಿಹಾರ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ಅಪಘಾತ ಪರಿಹಾರದ ಅರ್ಜಿಯಲ್ಲಿ ನಾನು ಪಕ್ಷಗಾರಳಾಗಿದ್ದೆ ಎಂದರೆ ಸರಿಯಲ್ಲ. ಪರಿಹಾರ ತೆಗೆದುಕೊಂಡಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹುಟ್ಟಿದ ದಿನಾಂಕಃ17-04-1973 ಎಂದರೆ ಸರಿ. ನನ್ನ ಜನನ ಪ್ರಮಾಣಪತ್ರವನ್ನು ತಂದು ಕೊಡಲು ಸಾಧ್ಯವಿಲ್ಲ. ನನ್ನ 10ನೇ ತರಗತಿ ಅಂಕಪಟ್ಟಿಯನ್ನು ಹಾಜರುಪಡಿಸಬಹುದು. ನನ್ನ ಮದುವೆಯನ್ನು ಯಾಕುಬ್ ರವರು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಯಾಕುಬ್ ರವರು ನನ್ನ ಚಿಕ್ಕಪ್ಪ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ತಾಯಿಯವರ ಕಡೆಯವರನ್ನು ಕರೆದು ಸಾಕ್ಷಿ ಮಾಡಬಹುದೇ ಎಂದರೆ, ಅವರು ಯಾರೂ ಬರುವುದಿಲ್ಲ. ನಿಮ್ಮ ಗಂಡನನ್ನು ಸಾಕ್ಷಿದಾರನಾಗಿ ಮಾಡಬಹುದೇ ಎಂದರೆ, ಅವರೂ ಸಹಾ ಬರುವುದಿಲ್ಲ. ನನ್ನ ಹಳೆಯ ಚುನಾವಣಾ ಗುರುತಿನ ಚೀಟಿಯನ್ನು ಹಾಜರುಪಡಿಸಬಹುದೇ ಎಂದರೆ, ಹಳೆಯ ಗುರುತಿನ ಚೀಟಿ ನನ್ನ ಬಳಿ ಇಲ್ಲ. ನಾನು ನನ್ನ ಡಿಎನ್.ಎ ಪರೀಕ್ಷೆ ಮಾಡಿಸಲು ತಯಾರಿಲ್ಲ. ಆರೋಪಿತರು ನನ್ನ ಸಂಬಂಧಿಕರಾದ ಕಾರಣ ಡಿಎನ್.ಎ ಪರೀಕ್ಷೆ ಮಾಡಿಸಲು ಅವರು ತಯಾರಿದ್ದಾರೆ ಎಂದರೆ, ಅವರು ತಯಾರಿರಬಹುದು, ನಾನು ತಯಾರಿಲ್ಲ. ಸಿವಿಲ್ ದಾವೆಯಲ್ಲಿ ಡಿಎನ್.ಎ ಪರೀಕ್ಷೆ ಮಾಡಿಸಲು ನಾನು ಒಪ್ಪಿಕೊಂಡಿಲ್ಲ ಎಂದರೆ, ಅವರು ಡಿಎನ್.ಎ ಪರೀಕ್ಷೆಗೆ ಕೇಳಿರುವುದಿಲ್ಲ. 1ನೇ ಆರೋಪಿಯ ಹೆಸರಿಗೆ ಖಾತೆ ಮಾಡುವಾಗ ಇಓ. ಮತ್ತು ಪಿಡಿಓ ರವರು ತನಿಖೆ ಮಾಡಿ ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪಿಡಿಓ ರವರು ಲೋಕಾಯುಕ್ತಕ್ಕೆ ಪತ್ರ ಬರೆದಿದ್ದರು, ಆದರೆ ನಾನು ಲೋಕಾಯುಕ್ತದ ಮುಂದೆ ವಿಚಾರಣೆಗೆ ಹಾಜರಾಗಿಲ್ಲ ಎಂದರೆ ಸರಿ. 1ನೇ ಆರೋಪಿಯು ನನ್ನ ವಿರುದ್ಧ ಪೋಲೀಸ್ ಠಾಣೆ ಮತ್ತು ಎಸ್.ಪಿ. ಕಛೇರಿಗೆ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಹೆಸರು ಇರುತ್ತದೆ, ಆದರೆ ವ್ಯವಸಾಯಗಾರರು ಎಂದು ಬರೆದಿರುವುದು ಸರಿ ಇರುವುದಿಲ್ಲ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ದಾಖಲೆ ನನ್ನ ವಿವಾಹ ಪ್ರಮಾಣಪತ್ರದ ದೃಢೀಕೃತ ಪ್ರತಿ ಎಂದರೆ ಸರಿ. ಸದರಿ

ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ ನನ್ನ ಸಹಿಯ ಕೆಳಗೆ ಅಲೀಮುಲ್ಲಾ ಷರೀಫ್ ಸಹಿ ಮಾಡಿದ್ದಾರೆ ಎಂದರೆ, ನನಗೆ ಗೊತ್ತಿಲ್ಲ. ನಿಡಿ-2 ರಲ್ಲಿ 2 ನೇ ಆರೋಪಿಯ ಸಹಿ ಇದೆ ಎಂದರೆ, ನನಗೆ ಗೊತ್ತಿಲ್ಲ. ನಾನು ಮತ್ತು ಆರೋಪಿತರು ಚೆನ್ನಾಗಿದ್ದಾಗ ಆರೋಪಿತರ ಮನೆಯಿಂದ ದಾಖಲೆಗಳನ್ನು ತೆಗೆದುಕೊಂಡು ಹೋಗಿದ್ದೆ ಎಂದರೆ ಸರಿಯಲ್ಲ. ಈ ಬಗ್ಗೆ ಆರೋಪಿತರು ಪೋಲೀಸರಿಗೆ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ದಿಲ್ ಶಾದ್ ರವರು ನನ್ನ ಅಕ್ಕ ಎಂದು ನನಗೆ ಗೊತ್ತಿರುವ ಕಾರಣ ಅವರ ಶಾಲೆಯ ದಾಖಲೆಗಳನ್ನು ತಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಆಸ್ತಿಯನ್ನು ಕಬಳಿಸಲು ಸುಳ್ಳು ಪಿರ್ಯಾದನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಲೋಕ್ ಅದಾಲತ್ ನಲ್ಲಿ ಸುಳ್ಳು ಮಾಹಿತಿ ಕೊಟ್ಟು ಸುಳ್ಳು ಮರಣ ಪ್ರಮಾಣಪತ್ರ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಪಿಸಿಆರ್.35/2015 ರಲ್ಲಿ ನನಗೆ ನೋಟೀಸ್ ಬಂದಿದ್ದು ಅದರಲ್ಲಿ ನಾನು ವಕೀಲರಿಗೆ ವಕಾಲತ್ ಕೊಟ್ಟಿರುತ್ತೇನೆ ಎಂದರೆ, ವಕಾಲತ್ ಕೊಟ್ಟಿರುತ್ತೇನೆ ಆದರೆ ಯಾವುದಕ್ಕೆ ಎಂದು ಗೊತ್ತಿಲ್ಲ. ಸಾಕ್ಷಿಯು ಪುನಃ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಪಿಸಿಆರ್.35/2015 ಅನ್ನು ನನ್ನ ಮೇಲೆ ಹಾಕಿದ್ದರು. ಈಗ ತೋರಿಸುತ್ತಿರುವ ದಾಖಲೆ ಪಿಸಿಆರ್.35/2015 ರ ದೃಢೀಕೃತ ಪ್ರತಿಯಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-3 ಎಂದು ಗುರುತಿಸಲಾಯಿತು. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿಯಲ್ಲಿ ಹೇಳಿರುವ ವಿಷಯಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ ಎಂದು ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಚಿಕ್ಕಮಗಳೂರು.

CC.285/2020
PW.1